ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಹಾಗೆ ಇದ್ದಲ್ಲಿ, ಸನ್ಮಾನ್ಯ ಉಪಾಧ್ಯಕ್ಷರೇ, ಅನೇಕ ಕಡೆ, ಇಲ್ಲಿ ವಸತಿ ಸಚಿವರು, ಮಾನ್ಯ ನಗರಾಭಿವೃದ್ಧಿ ಸಚಿವರು ಇಲ್ಲಿರುವಂಥ ಸಂದರ್ಭದಲ್ಲಿ ಅವರಿಗೆ ನನ್ನ ಒಂದು ಸಲಹೆ ಏನೆಂದರೆ ಅನೇಕ ಕೊಳಚೆ ಪ್ರದೇಶಗಳಲ್ಲಿ ಅವರು ವಾಸ ಮಾಡುವಂಥ ನಿವಾಸಿಗಳಿಗೆ ನಿವೇಶನವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವರಿಗೆ ಬೇರೆ ಕಡೆ ಸ್ಥಳಾಂತರಿಸಿ ನಿವೇಶನವನ್ನು ಒದಗಿಸಬೇಕು, ಮನೆಗಳನ್ನು ನಿರ್ಮಿಸುವುದರ ಬಗ್ಗೆ ಈ ಸರ್ಕಾರ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಉಪಾಧ್ಯಕ್ಷರು:- ಈಗ ಎಪ್ಪತ್ತು ನಿಮಿಷ ಆಯಿತು. ಮೊನ್ನೆ 40 ನಿಮಿಷ ಮಾತನಾಡಿದ್ದೀರಿ, ಇವೊತ್ತು ಮೂವತ್ತು ನಿಮಿಷವಾಯಿತು.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಆಯಿತು. ಸನ್ಮಾನ್ಯ ಉಪಾಧ್ಯಕ್ಷರೇ, ನಗರಸಭೆ ಮತ್ತು ಪುರಸಭೆಗಳ ಒಂದು ವಿಚಾರದಲ್ಲಿ ಇವೊತ್ತು ಇಟ್ಟಿರುವಂಥ ಬೇಡಿಕೆಯ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವಂಥ ವಿಚಾರ ಏನೆಂದರೆ ಪುರಸಭೆ ಮತ್ತು ನಗರಸಭೆಗಳಲ್ಲಿ ಅನೇಕ ಕಾರ್ಯಕ್ರಮಗಳು ಇದೆ.

05.00 ಪಿ.ಎಂ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

ಉಪಾಧ್ಯಕ್ಷರು:- ಏನು ಹೇಳಿ.

ವಿಷಯ:- (ಆ) ಪರ್‌ಫಾರ್ಮೆನ್ಸ್ ಬಡ್ಜೆಟ್ ಒದಗಿಸದೇ ಇರುವ ಬಗ್ಗೆ.

+ಶ್ರೀ ಎಂ.ಮಲ್ಲಿಕಾರ್ಜು ಖರ್ಗೆ:- ನನ್ನ ಪಾಯಿಂಟ್ ಆಫ್ ಆರ್ಡರ್ ಏನು ಎಂದರೆ ಈ ದಿನ ಬೇಡಿಕೆ ಸಂಖ್ಯೆ 30, 31, 28, 29, 23, 25, 24, 37, 38, 40, 51, 47, 32, 11, 14, 10, ನಿ 35, 36, 26 ಎಂದು ಇದೆ. ಈ ಡಿಮ್ಯಾಂಡ್‌ಗಳಿಗೆ ಸಂಬಂಧಪಟ್ಟಂತೆ ಮಂತ್ರಿಗಳೂ ಕೂಡ ಸದನದಲ್ಲಿ ಹಾಜರು ಇರಬೇಕು ಎಂದು ಇದೆ. ಇದು ನನ್ನ ಒಂದನೆಯ ವಿಷಯ. ಇನ್ನು ಎರಡನೆಯದಾಗಿ ಪರಫಾರ್ಮೆನ್ಸ್ ಬಜೆಟ್ ಕೂಡ ನೀವು ಆನ್ಯೂಯಲ್ ರಿಪೋರ್ಟ್ ಜೊತೆಯಲ್ಲಿಯೇ ಕೊಡಬೇಕು ಎಂದು ಇದೆ. ಅಂದರೆ ಆ್ಯನ್ಯುಯಲ್ ರಿಪೋರ್ಟ್ ಹೋದ ವರ್ಷದ್ದು, ಫರ್‌ಫಾರ್ಮೆನ್ಸ್ ಬಜೆಟ್, ಆ್ಯನ್ಯುಯಲ್ ರಿಪೋರ್ಟ್ ಮತ್ತು ಪರಫಾರ್ಮೆನ್ಸ್ ಬಜೆಟ್ ಏನು ಇದೆ ಅದನ್ನು ಕೊಡಬೇಕು. ಆದರೆ ನಮಗೆ ಕೇವಲ ಮೂರು ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಪರ್‌ಫಾರ್ಮೆನ್ಸ್ ಬಜೆಟ್‌ಗಳನ್ನು ಮಾತ್ರ ಈಗ ಒದಗಿಸಲಾಗಿದೆ. ಹೆಲ್ತ್ ಅಂಡ್ ಫ್ಯಾಮಿಲಿ ಪ್ಲಾನಿಂಗ್, ಸೋಷಿಯಲ್ ವೆಲ್‌ಫೇರ್, ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಇಲಾಖೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಪರ್‌ಫಾರ್ಮೆನ್ಸ್ ಬಜೆಟ್ ಇವೊತ್ತು ಬಂದಿದೆ. ಸುಮಾರು

ಇನ್ನೂ 12 ಇಲಾಖೆಗಳ ಪರ್‌ಫಾರ್ಮೆನ್ಸ್ ಬಜೆಟನ್ನು ಮಾತ್ರ ಇನ್ನೂ ನಮಗೆ ಒದಗಿಸಿಕೊಟ್ಟಿಲ್ಲ. ಈ ಪರ್‌ಫಾರ್ಮೆನ್ಸ್ ಬಜೆಟ್‌ನ್ನು ನಮಗೆ ಒದಗಿಸಿಕೊಡದಿದ್ದರೆ ಕಂಪ್ಯಾರಿಟೀವ್ ಸ್ಟಡಿ ಮಾಡಿ ಹೇಳುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಇನ್ನು ಎರಡನೆಯದಾಗಿ, ಎಷ್ಟು ಹಣ ಹೋದ ವರ್ಷ ಇಟ್ಟಿದ್ದರು ಮತ್ತು ಈ ವರ್ಷ ಎಷ್ಟು ಇಟ್ಟಿದ್ದಾರೆ ಎನ್ನತಕ್ಕಂಥದ್ದು ಕೂಡ ಫಿಸಿಕಲ್ ಟಾರ್ಗೆಟ್ ಮತ್ತು ಫೈನಾನ್ಸಿಯಲ್ ಟಾರ್ಗೆಟ್ ಎರಡನ್ನೂ ಕೂಡ ಅದರಲ್ಲಿ ನೀವು ಅಳವಡಿಸಿಕೊಂಡಿರುತ್ತೀರಿ. ಅದಕ್ಕಾಗಿ ಕೇವಲ ಮೂರು ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಪರ್‌ಫಾರ್ಮೆನ್ಸ್ ಬಜೆಟ್ ಇದ್ದು ಇನ್ನೂ ಬಾಕಿ ಉಳಿದುಕೊಂಡಿರುವ ಸುಮಾರು 10 ಇಲಾಖೆಗೆ ಸಂಬಂಧಪಟ್ಟ ಪರ್‌ಫಾರ್ಮೆನ್ಸ್ ಬಜೆಟ್ ಈ ಸದನದ ಮುಂದೆ ಇಲ್ಲದಿರುವಾಗ ಹೇಗೆ ಈ ಸದನದಲ್ಲಿ ಚರ್ಚೆ ಆಗಬೇಕು ಮತ್ತು ಆ ಚರ್ಚೆ ಹೇಗೆ ಫ್ರುಟ್‌ಫುಲ್ ಎನ್ನುವುದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಉಪಾಧ್ಯಕ್ಷರು:- ಈಗಾಗಲೇ ಇದನ್ನು ಕೊಟ್ಟಿದ್ದಾರೆಂದು ಹೇಳಿದ್ದಾರಲ್ಲ!

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆ್ಯನ್ಯುಯಲ್ ರಿಪೋರ್ಟ್ ಬೇರೆ. ಆದರೆ ಪರ್‌ಫಾರ್ಮೆನ್ಸ್ ರಿಪೋರ್ಟ್ ಬೇರೆ. ಈ ಪರ್‌ಫಾರ್ಮೆನ್ಸ್ ರಿಪೋರ್ಟ್ ಕೇವಲ ಮೂರ್ನಾಲ್ಕು ಇಲಾಖೆಗಳಿಗೆ ಸಂಬಂಧಪಟ್ಟಿದ್ದನ್ನು ಒದಗಿಸಿರುವುದು ಬಿಟ್ಟರೆ ಸುಮಾರು 10 ಇಲಾಖೆಗಳ ಪರ್‌ಫಾರ್ಮೆನ್ಸ್ ಬಜೆಟ್ ಇನ್ನೂ ಬಂದಿಲ್ಲ.

ಉಪಾಧ್ಯಕ್ಷರು:- ಈಗಾಗಲೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಮಾಜ ಕಲ್ಯಾಣ ಮತ್ತು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗಳದ್ದು ಪರ್‌ಫಾರ್ಮೆನ್ಸ್ ಬಜೆಟ್ ಬಂದಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾನು ಈಗಾಗಲೇ ಅವುಗಳನ್ನು ಹೇಳಿದ್ದೇನೆ. ಇನ್ನೂ ಎಷ್ಟು ಇಲಾಖೆಗಳದ್ದು ಬೇಡಿಕೆಗಳಿವೆ. ನೀವೇ ನೋಡಿ. ಪರ್‌ಫಾರ್ಮೆನ್ಸ್ ಬಜೆಟ್ ಇಲ್ಲದೇ ಇರುವಾಗ ಹೀಗೆ ಬಂದಿದ್ದೇವೆ ಎಂದರೆ ಹೇಗೆ? ಈಗ ಇಲ್ಲೇನಾಗಿದೆಯೆಂದರೆ ಈ ಸದನವನ್ನು ನಾವು ಬಹಳ ಲಘುವಾಗಿ ತೆಗೆದುಕೊಂಡಿದ್ದೇವೆ. Nobody is taking seriously ಅದರಲ್ಲಿ ಏನಿದೆ, ಏನು ಬರೆದಿದ್ದಾರೆ, ಏನು ಓದಬೇಕು, ಏನು ಕೇಳಬೇಕು, ಏನು ಹೇಳಬೇಕು ಏನೂ ಇಲ್ಲ.

ಉಪಾಧ್ಯಕ್ಷರು:- ಈಗ ಸರ್ಕಾರಕ್ಕೆ ಹೇಳಿ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸರ್ಕಾರಕ್ಕೆ ನೀವು ತರಾಟೆ ತೆಗೆದುಕೊಳ್ಳಬೇಕು. When you cannot provide material, how do you expect that we can perform well? ಅದು ಸುಮ್ಮನೇ ಏನೋ ಆ್ಯನ್ಯುಯಲ್ ರಿಪೋರ್ಟ್ ಬರೆದುಕೊಂಡು ಬಂದುದನ್ನು ಗೀಟು ಹಾಕಿಕೊಂಡು ಅದಕ್ಕೆ ಚೀಟಿ ಹಚ್ಚಿಕೊಂಡು ಅದನ್ನೇ ಹೇಳೋದು.

ಉಪಾಧ್ಯಕ್ಷರು:- ಬಚ್ಚೇಗೌಡರೇ, ಯಾರಾದರೊಬ್ಬರು ಇಲ್ಲಿ ಸರ್ಕಾರದ ಪರವಾಗಿ ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ಈಗ ಡಿಮ್ಯಾಂಡ್ ಮೇಲೆ ಡಿಸ್‌ಕಷನ್ ನಡೆದಿದೆ. ಈಗಾಗಲೇ ಮೂರನೇ ದಿವಸಕ್ಕೆ ಡಿಸ್‌ಕಷನ್ ನಡೆಯುತ್ತಿರುವಾಗ ಡಿಸ್‌ಕಷನ್‌ಗೆ ಅವಕಾಶ ಇಲ್ಲದೇ ಇರಬಹುದು, ಸಮಯ ಇಲ್ಲದೇ ಇರಬಹುದು, ಆದರೆ ಮಂಡನೆ ಮಾಡಿ ಮೂರು ದಿವಸಗಳಾಗಿದ್ದರೂ....

ಉಪಾಧ್ಯಕ್ಷರು:- ಸರ್ಕಾರದ ಪರವಾಗಿ ತರಿಸಿಕೊಡುತ್ತೇವೆ ಎಂದು ಈಗ ಹೇಳುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗಾಗಲೇ ಮೂರು ದಿವಸಗಳಾಗಿದೆಯಲ್ಲವೇ ಇಂಟ್ರಡ್ಯೂಸ್ ಮಾಡಿ, ಬಜೆಟ್ ಚರ್ಚೆ ಪ್ರಾರಂಭವಾಗಿ ಈ ಸದನದಲ್ಲಿ ಬಜೆಟ್ ಡ್ಯಿಮ್ಯಾಂಡ್ ಮಂಡನೆ ಮಾಡುವಾಗ ಅದರ ಜೊತೆಯಲ್ಲಿಯೇ ಪರ್‌ಫಾರ್ಮೆನ್ ಬಜೆಟ್ ಇದ್ದರೆ ನಾವು ಅದನ್ನು ಓದಿಕೊಂಡು ಬಂದು ಅದರ ಬಗ್ಗೆ ಇಲ್ಲಿ ಹೇಳಬಹುದು. ಮಂಡನೆ ಮಾಡಿ ಮೂರು ದಿವಸಗಳಾಗಿ ಇನ್ನೂ ಪರ್‌ಫಾರ್ಮೆನ್ಸ್ ಬಜೆಟ್ ನಮ್ಮ ಕೈಗೆ ಸಿಕ್ಕಿಲ್ಲವೆಂದರೆ ಹೇಗೆ ಓದಿ ಯಾವ ಯಾವ ಇಲಾಖೆಗಳ ಮೇಲೆ ಮಾತನಾಡುವುದಕ್ಕೆ ಸಾಧ್ಯವಿದೆ?

ಉಪಾಧ್ಯಕ್ಷರು:- ಆದಷ್ಟು ಬೇಗ ತರಿಸಿಕೊಡುತ್ತಾರೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್:- ಒಟ್ಟು 10 ಬೇಡಿಕೆಗಳು ಇವೆ. ಯಾವಾಗ ಪರ್‌ಫಾರ್ಮೆನ್ಸ್ ಬಡ್ಜೆಟ್ ಅನ್ನು ತರಿಸಿಕೊಡುತ್ತಾರೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಲಿ.

ಉಪಾಧ್ಯಕ್ಷರು:- ಆದಷ್ಟು ಬೇಗ ತರಿಸಿಕೊಡುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮುದ್ರಣವಾಗದೇ ಇದ್ದು ಒದಗಿಸಿಕೊಡುತ್ತೇನೆಂದು ಹೇಳಿದರೆ ಹೇಗೆ? ಈಗಿರುವ 10 ಡಿಪಾರ್ಟ್‌ಮೆಂಟ್‌ಗಳದ್ದರಲ್ಲಿ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಇಲಾಖೆಯದ್ದಾಗಲೀ ಯಾವುದೂ ಇಲ್ಲ, ಪವರ್ ಪ್ರಾಜೆಕ್ಟ್ಸ್ ಬಗ್ಗೆ ಪರ್‌ಫಾರ್ಮೆನ್ಸ್ ಬಜೆಟ್ ಇಲ್ಲ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯದ್ದೂ ಇಲ್ಲ.

ಉಪಾಧ್ಯಕ್ಷರು:- ಖರ್ಗೆಯವರು ಈಗ ತರಿಸಿಕೊಡುತ್ತೇವೆ ಎಂದು ಹೇಳಿದ್ದಾರಲ್ಲಾ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಯಾವಾಗ?

ಉಪಾಧ್ಯಕ್ಷರು:- ಈಗ ತರಿಸಿಕೊಡುತ್ತಾರೆ, ಕಳುಹಿಸಿದ್ದಾರೆ.

ಶ್ರೀ ವೈ.ರಾಮಕೃಷ್ಣ:- ಇವೊತ್ತು ಏನು ಬೇಡಿಕೆಗಳನ್ನು ಮಂಡಿಸಿದ್ದಾರೆ ಅವುಗಳ ಬಗ್ಗೆ ಚರ್ಚೆ ಮಾಡುವಾಗ ತಾನೇ ಈ ಪರಫಾರ್ಮೆನ್ಸ್ ಬಜೆಟ್ ಇರಬೇಕು. ಚರ್ಚೆ ಎಲ್ಲಾ

ಆದಮೇಲೆ ನಾಳೆ ಕೊಟ್ಟರೆ ಏನು ಸುಖ ಬಂತು. But How are we to know? ಇವೊತ್ತು ಏನು ಮಂಡನೆ ಮಾಡಿದ್ದಾರೆ, ಅವುಗಳ ಬಗ್ಗೆ ಪರ್‌ಫಾರ್ಮೆನ್ಸ್ ಬಜೆಟ್ ಇದೆಯೇ? ಸೋಷಿಯಲ್ ವೆಲ್‌ಫೇರ್‌ದು ಮುಂದೆ ಬರುತ್ತದೆ, ಇವೊತ್ತು ಮಂಡಿಸಿರುವ ಹೌಸಿಂಗ್‌ದ್ದು ಇದೆಯಾ? ಮುಖ್ಯಮಂತ್ರಿಗಳ ಖಾತೆಗೆ ಸಂಬಂಧಪಟ್ಟಂತೆ ಪರಫಾರ್ಮೆನ್ಸ್ ಬಜೆಟ್ ಇದೆಯಾ? ನಾನು ಈ ವಿಷಯವನ್ನು ಅಧ್ಯಕ್ಷರು ಇದ್ದಾಗಲೂ ಎತ್ತಿದ್ದೇನೆ. ಯಾವುದು ಪರ್‌ಫಾರ್ಮೆನ್ಸ್ ಬಜೆಟ್ ಕೊಟ್ಟಿಲ್ಲ ಆ ಬೇಡಿಕೆಯನ್ನು ನಮೂದಿಸಬೇಡಿ, ಅಟ್‌ಲೀಸ್ಟ್ ಯಾವುದು ಪರ್‌ಫಾರ್ಮೆನ್ಸ್ ಬಜೆಟ್‌ನ್ನು ಕೊಟ್ಟಿದ್ದಾರೆ ಅದರ ವಿಚಾರವನ್ನು ಬೇಕಾದರೆ ಮಂಡಿಸಿ, ಅದರ ಮೇಲೆ ನಾವು ಮಾತನಾಡೋಣ. ಅದನ್ನು ನಾನು, ಈಗ ಇಲ್ಲಿ ಹೇಳುತ್ತಿರುವುದು.

ಉಪಾಧ್ಯಕ್ಷರು:- ಈಗ ಬಿ.ಆರ್.ಯಾವಗಲ್‌ರವರೇನೋ ಮಾತನಾಡುತ್ತಾರಂತೆ; ಅವರು ಮಾತನಾಡಲಿ.

ಶ್ರೀ ಬಿ.ಆರ್.ಯಾವಗಲ್:- ಅಧ್ಯಕ್ಷರೇ, ಬರೇ ಆ್ಯನ್ಯುಯಲ್ ರಿಪೋರ್ಟ್ಸ್ ಸಹಿತ ನಾಲ್ಕಾರು ಖಾತೆಗಳು ಬಿಟ್ಟರೆ ಬೇರೆ ಯಾವ ಕಾಪಿಗಳು ಇಲ್ಲ ಆ ನೋಟೀಸ್ ರೂಮಿನಲ್ಲಿ. ಕೇಳಿದರೆ ಆವಾಗ ತಂದುಕೊಡುತ್ತೇವೆ ಎಂದು ಹೇಳುತ್ತಾರೆ. ಎರಡನೆಯದಾಗಿ, ಪರ್‌ಫಾರ್ಮೆನ್ಸ್ ಬಜೆಟ್ ಕಾಪಿಯನ್ನು ಏನು ಕೊಡಬೇಕು ಅದನ್ನೂ ಸಹಿತ ನಮಗೆ ಕೊಟ್ಟಿಲ್ಲ, ಇದಲ್ಲದೇ ವಿಷಯ ಸಮಿತಿಯ ವರದಿಗಳನ್ನು ಎಲ್ಲಾ ಸದಸ್ಯರಿಗೂ ಹಂಚುವಂಥ ಕೆಲಸವನ್ನು ಮಾಡಿಲ್ಲ, ಸದಸ್ಯರುಗಳೇ ಹೋಗಿ ಕಲೆಕ್ಟ್ ಮಾಡಿಕೊಂಡು ಬರಬೇಕಾಗಿದೆ. ಇದರ ಬಗ್ಗೆ ಆದಷ್ಟು ಬೇಗ ಸದಸ್ಯರಿಗೆ ಒದಗಿಸುವಂಥ ಕೆಲಸ ಆಗಬೇಕು.

ಶ್ರೀ ಬಿ.ಎಸ್.ಬಚ್ಚೇಗೌಡ:- ಆದಷ್ಟು ಬೇಗ ಒದಗಿಸುವಂತೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆದಷ್ಟು ಬೇಗ ಎಂದರೆ ಯಾವಾಗ? ಡಿಮ್ಯಾಂಡ್ ಮೇಲೆ ಡಿಸ್‌ಕಷನ್ ಪ್ರಾರಂಭವಾಗಿದೆ. ಈಗ ಸಗೀರ್ ಅಹಮ್ಮದ್‌ರವರ ಭಾಷಣವೇನೋ ಮುಕ್ತಾಯದ ಹಂತಕ್ಕೆ ಬಂದಿದೆ. ಈಗ ಇನ್ನೊಬ್ಬ ಸದಸ್ಯರು ಮಾತನಾಡಬೇಕು. ಈ ರೀತಿಯಲ್ಲಿ ಮಾತನಾಡಬೇಕಾದಾಗ ಪರ್‌ಫಾರ್ಮೆನ್ಸ್ ಬಜೆಟ್ ಕಾಪಿ ನಮ್ಮ ಹತ್ತಿರ ಇಲ್ಲದೇ ಇದ್ದಾಗ ಮತ್ತು ವಿಷಯ ಸಮಿತಿಯ ವರದಿಗಳು ಅವರ ಹತ್ತಿರ ಇಲ್ಲದೇ ಇದ್ದಾಗ ಯಾವ ರೀತಿಯಿಂದ ಆ ಒಂದು ಚರ್ಚೆಗೆ ನ್ಯಾಯವನ್ನು ಒದಗಿಸಿಕೊಡಬಹುದು? ಅದಕ್ಕಾಗಿ ನಮ್ಮ ರೂಲ್ಸ್‌ನಲ್ಲಿ ಏನು ಪ್ರೊವೈಡ್ ಮಾಡಿದ್ದಾರೆಂದರೆ ಆ್ಯನ್ಯುಯಲ್ ರಿಪೋರ್ಟ್ಸ್ ಜೊತೆಯಲ್ಲಿ ಪರ್‌ಫಾರ್ಮೆನ್ಸ್ ಬಜೆಟ್‌ನ್ನು ಕೊಡಬೇಕು ಎಂದು ರೂಲ್ಸ್‌ನಲ್ಲಿ ಇದೆ. ಈ ರೂಲ್‌ನ್ನು ವಾಯಿಲೇಟ್ ಮಾಡಿ ಹಾಗೆ ಚರ್ಚೆಯನ್ನು ನಡೆಸುತ್ತೇವೆ ಎಂದರೆ ನಡೆಸಿರಿ, ಅದು ನಿಮ್ಮ ಇಚ್ಛೆ.

ಉಪಾಧ್ಯಕ್ಷರು:- ಇಲ್ಲ, ಇಲ್ಲ, ಆ ರೀತಿಯಾಗುವುದಿಲ್ಲ. ಮಾನ್ಯ ಬಚ್ಚೇಗೌಡರು

ಇದರ ಬಗ್ಗೆ ಏನು ಹೇಳುತ್ತಾರೆ ಕೇಳೋಣ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಖರ್ಗೆಯವರು ತಿಳಿಸಿದ ಹಾಗೆ ನಾಲ್ಕು ಇಲಾಖೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಪರ್‌ಫಾರ್ಮೆನ್ಸ್ ಬಜೆಟ್‌ನ್ನು ಒದಗಿಸಿಲಾಗಿದೆ. ಅವುಗಳೆಂದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಮಾಜ ಕಲ್ಯಾಣ, ವಾಣಿಜ್ಯ ಮತ್ತು ಕೈಗಾರಿಕೆ ಮತ್ತು ಉದ್ಯೋಗ ಮತ್ತು ತರಬೇತಿ ಇಲಾಖೆಗಳಾಗಿವೆ. ಇನ್ನು ಉಳಿದ ಇಲಾಖೆಗಳ ಪರ್‌ಫಾರ್ಮೆನ್ಸ್ ಬಜೆಟ್‌ನ್ನು ಮಾನ್ಯ ಸದಸ್ಯರುಗಳಿಗೆ ಆದಷ್ಟು ಬೇಗ ಒದಗಿಸುತ್ತೇವೆ.

ಶ್ರೀ ಬಿ.ಎನ್.ಬಚ್ಚೇಗೌಡ:- ನಾಳೆಯೇ ಒದಗಿಸಿಕೊಡುತ್ತೇವೆ ಎನ್ನುವ ನಿಟ್ಟಿನಲ್ಲಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಒದಗಿಸಿಕೊಡುತ್ತೇವೆ.

ಶ್ರೀ ಆಯನೂರ್ ಮಂಜುನಾಥ್:- ನಾವು ಹೊಸ ಸದಸ್ಯರಾಗಿ ಬಂದಿದ್ದೇವೆಯಾದ ಕಾರಣ ಬಜೆಟ್ ಹೀಗೇ ಮಂಡನೆಯಾಗುತ್ತದೆಯೇನೋ ಎಂದು ತಿಳಿದುಕೊಂಡುಬಿಟ್ಟರೆ ಕಷ್ಟವಾಗುತ್ತದೆ. ಪರ್‌ಫಾರ್ಮೆನ್ಸ್ ಬಜೆಟ್‌ನ್ನು ತರಿಸಿಕೊಡಿ, ಆಮೇಲೆ ಚರ್ಚೆ ಮಾಡೋಣ. ಅಲ್ಲಿಯತನಕ ಹೌಸ್‌ನ್ನು ಮುಂದೆ ಹಾಕಿ.

ಉಪಾಧ್ಯಕ್ಷರು:- ಆಯಿತು. ಈಗ ಸಗೀರ್ ಅಹಮ್ಮದ್‌ರವರು.....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹೌಸ್‌ನ್ನು ಅಡ್ಜರ್ನ್ ಮಾಡಿ. ಏಕೆಂದರೆ ಪರ್‌ಫಾರ್ಮೆನ್ಸ್ ಬಜೆಟ್‌ನ್ನು ತರಿಸಿಕೊಡುವುದಕ್ಕೆ ಎಷ್ಟು ದಿವಸ ಬೇಕು? ಅಧ್ಯಕ್ಷರೇ, ಇದು ಸರಿಯಲ್ಲ. ಪ್ರತಿಯೊಂದು ರೂಲ್‌ನ್ನು ವಾಯಿಲೇಟ್ ಮಾಡಿಕೊಳ್ಳುತ್ತಾ ಹೋದರೆ ಈ ಸದನಕ್ಕೆ ಗೌರವ ಬರುವುದಿಲ್ಲ. ಇದಲ್ಲದೇ ನಾಳೆ ಇಂಥದ್ದರ ಬಗ್ಗೆ ಯಾವ ಅಧಿಕಾರಿಗಳು ಸೀರಿಯಸ್ ತೆಗೆದುಕೊಳ್ಳುವುದಿಲ್ಲ. ಏನ್ ಕೊಟ್ಟರೂ ನಡೆಯುತ್ತದೆ, ಏನ್ ಹೇಳಿದರೂ ನಡೆಯುತ್ತದೆ ಎನ್ನುವ ರೀತಿಯಲ್ಲಿ ಆಗುತ್ತದೆ.

ಉಪಾಧ್ಯಕ್ಷರು:- ನಾನು ಅವರಿಗೆ ನಿರ್ದಿಷ್ಟವಾಗಿ ಉತ್ತರ ಹೇಳುವುದಕ್ಕೆ ಹೇಳಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಈಗಾಗಲೇ 4 ಇಲಾಖೆಗಳಿಗೆ ಸಂಬಂಧಪಟ್ಟಂತೆ ಪರ್‌ಫಾರ್ಮೆನ್ಸ್ ಬಜೆಟ್‌ಗಳನ್ನೂ ಕೊಟ್ಟಿದ್ದೇವೆ. ಇನ್ನು ಉಳಿದಂಥದ್ದು ನಾಳೆಯೇ ಸರಬರಾಜಾಗುತ್ತದೆ ಎಂದು ಹೇಳಲು ಈಗ ಕಷ್ಟವಾಗುತ್ತದೆ. ಅವು ಯಾವ ಹಂತದಲ್ಲಿದೆ ಎನ್ನುವ ಬಗ್ಗೆ ನನಗೆ ಸರಿಯಾದ ಮಾಹಿತಿ ಸಿಕ್ಕಿಲ್ಲ.

ಒಬ್ಬ ಮಾನ್ಯ ಸದಸ್ಯರು:- ಸರ್ಕಾರದ ಕೆಲಸ ಈ ಹಂತದಲ್ಲಿಯೇ ಈ ರೀತಿಯಲ್ಲಿ ನಡೆಯುತ್ತಿದೆ. ಇನ್ನು ಹಳ್ಳಿಗಳಲ್ಲಿ ತಾಲ್ಲೂಕು ಕಛೇರಿಯಲ್ಲಿ ಹೇಗೆ ಕೆಲಸ ನಡೆಯುತ್ತದೆ ಎನ್ನುವುದು ಇದರಿಂದ ಗೊತ್ತಾಗುತ್ತದೆಯಲ್ಲಾ. ಈ ಹಂತದಲ್ಲಿಯೇ ಕೆಲಸ ಈ ರೀತಿ ನಡೆಯುತ್ತಿರುವಾಗ ಇನ್ನು ತಾಲ್ಲೂಕು ಕಛೇರಿ ಗತಿ ಏನು?

ಶ್ರೀ ಎಸ್.ಸುರೇಶ್‌ಕುಮಾರ್:- ಗುರುವಾರವೇ ಮಾನ್ಯ ಅಧ್ಯಕ್ಷರು ಕಾನೂನು ಮತ್ತು

ಸಂಸದೀಯ ಸಚಿವರಿಗೆ ಆದೇಶ ಕೊಟ್ಟು ಎಲ್ಲರಿಗೂ ತಲುಪಿಸಬೇಕು ಎಂದು ಹೇಳಿದ್ದರು.

ಉಪಾಧ್ಯಕ್ಷರು:- ಅಧ್ಯಕ್ಷರ ಮಾತಿಗೂ ಇಲ್ಲಿ ಬೆಲೆ ಕೊಡುವುದಿಲ್ಲವಲ್ಲಾ.

ಒಬ್ಬ ಮಾನ್ಯ ಸದಸ್ಯರು:- ಅಧ್ಯಕ್ಷರೇ, ಕಾಟಾಚಾರಕ್ಕೆ ಇಲ್ಲಿ ಚರ್ಚೆ ಆಗಬಾರದು. ಒಂದು ದಿನದ ಸದನಕ್ಕೆ ಸಾಕಷ್ಟು ಹಣ ಖರ್ಚಾಗುತ್ತದೆ.

ಉಪಾಧ್ಯಕ್ಷರು:- ಸರ್ಕಾರದ ಪರವಾಗಿ ನಿರ್ದಿಷ್ಟವಾಗಿ ಉತ್ತರ ಹೇಳುತ್ತಾರೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ಈ ಸದನದ ನೀತಿ ನಿಯಮಗಳ ಪ್ರಕಾರ ಮುಂದಿನ ಸಾಲಿನಲ್ಲಿ ಮಂತ್ರಿಗಳು ಕೂರುವಂಥದ್ದು ಬಹಳ ಅವಶ್ಯಕ. ನಾವು ಆಡಳಿತ ಪಕ್ಷದಲ್ಲಿ ಇರುವಂಥ ಸಂದರ್ಭದಲ್ಲಿ.....

ಉಪಾಧ್ಯಕ್ಷರು:- ಸರ್ಕಾರದ ಪರವಾಗಿ ಉತ್ತರ ಹೇಳುವುದಕ್ಕೆ ಹೊರಟಿದ್ದಾರೆ, ತಾವು ಕೇಳಿ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಉಪಾಧ್ಯಕ್ಷರೇ, ಈ ಸದನದ ಒಂದು ನೀತಿ ನಿಯಮಗಳ ಪ್ರಕಾರ ಮುಂದಿನ ಸಾಲಿನಲ್ಲಿ ಮಂತ್ರಿಗಳು ಕುಳಿತುಕೊಳ್ಳುವಂತಾದ್ದು ಬಹಳ ಅವಶ್ಯಕ. ನಾವು ಆಡಳಿತ ಪಕ್ಷದಲ್ಲಿ ಇರುವಂತಹ ಸಂದರ್ಭದಲ್ಲಿ ಇವರು ವಿರೋಧ ಪಕ್ಷದಲ್ಲಿದ್ದಾಗ ಏನು ಮಾಡಿದರು ಎಂಬುದನ್ನು ಹೇಳುತ್ತೇನೆ. ಇವತ್ತು ಏನು ಹೇಳುತ್ತಾರೆ ಎಂದರೆ ಮಾತನಾಡಿದರೆ ಧರಣಿ ಮಾಡುತ್ತಾರೆ ಎಂದು ಹೇಳುತ್ತಾರೆ. ಇವರ ಪರ್‌ಫಾರ್ಮೆನ್ಸ್ ಬಜೆಟ್‌ನ ಪುಸ್ತಕಗಳು ಬರುವಂಥಾದ್ದು ವಿಳಂಬವಾಗಿದೆ. ಮಾತನಾಡುವಂತಹವು ನಾವು ಮಾತನಾಡುತ್ತೇವೆ. ಆದರೆ ಸರ್ಕಾರ ಇದನ್ನು ಒದಗಿಸಿಕೊಡುವುದಕ್ಕೆ ವಿಫಲವಾಗಿರುವುದರಿಂದ ಈ ಸದನವನ್ನು ಮುಂದೂಡಬೇಕೆಂದು ಕೋರಿ ತಮ್ಮಲ್ಲಿ ನಾನೂ ಸಹ ಸಭಾತ್ಯಾಗ ಮಾಡುತ್ತಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಉಪಾಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ನಾವಿದ್ದೇವೆ. ಮಾನ್ಯ ಸದಸ್ಯರು ವಿನಾಃ ಕಾರಣ ವಾಕ್‌ಔಟ್ ಮಾಡುವುದು ಶೋಭೆ ತರುವಂಥಾದ್ದು ಅಲ್ಲ.

SRI Y.RAMAKRISHNA:- At least take up the demands for which performance budget is available. ರೆಡಿ ಇಲ್ಲದೆ ಇರುವುದರ ಮೇಲೆ ಮಾತನಾಡಿ ಎಂದರೆ ಹೇಗೆ ಮಾತನಾಡುವುದು? ರೆಡಿ ಇರುವುದರ ಮೇಲೆ ಎಂದರೆ ಮಾತನಾಡೋಣ.

(ಗೊಂದಲ)

ಉಪಾಧ್ಯಕಷರು:- ಯಾವುದು ರೆಡಿ ಇದೆ ಇದರ ಬಗ್ಗೆ ಮಾತನಾಡಬಹುದಲ್ಲಾ.

ಒಬ್ಬ ಮಾನ್ಯ ಸದಸ್ಯರು:- ಸಬ್ಜೆಕ್ಟ್ ಕಮಿಟಿ ರಿಪೋರ್ಟ್‌ಗಳನ್ನು ನಾವು ಕಲೆಕ್ಟ್ ಮಾಡಿಕೊಂಡು ಬರಬೇಕು. ಮಾನ್ಯ ಸದಸ್ಯರು ಹೇಳುವುದು ಸರಿಯಿದೆಯೇ? ನಾವು ಪುಸ್ತಕವನ್ನು ಹುಡುಕಿಕೊಂಡು ಹೋಗಿ ಮಾತನಾಡಬೇಕೇ ಸ್ವಾಮೀ?

ಉಪಾಧ್ಯಕ್ಷರು:- ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಪ್ರಾರಂಭವಾಗುತ್ತದೆ.

(ಸದನವು ತನ್ನ ಕಲಾಪವನ್ನು 5 ಗಂಟೆ 12 ನಿಮಿಷಕ್ಕೆ ಮುಕ್ತಾಯಗೊಳಿಸಿ ಮತ್ತೆ ನಾಳೆ ಬೆಳಿಗ್ಗೆ ಅಂದರೆ ಮಂಗಳವಾರ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆಯು ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿರುವುದಿಲ್ಲವೆಂದು ಸೂಚಿಸುತ್ತದೆ.